ಐಕ್ಯರಂಗ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ—8

ಸಂಚಿಕೆ—50

ಡಿಸೆಂಬರ್ 14, 1986

50 ಪೈಸೆ

ಶಾಂತಿ ಕಾಪಾಡಲು ಮನವಿ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ|| ಎಸ್. ಸೂರ್ಯನಾರಾಯಣರಾವ್ ಈ ಕೆಳಕಂಡ ಹೇಳಿಕೆಯನ್ನು ನೀಡಿದ್ದಾರೆ.

ಗೌರವಯುತ ಪತ್ರಿಕೆಯಾದ ಡೆಕ್ಕನ್‌ಹೆರಾಲ್ಡ್‌ನ ಬಾನುವಾರದ ಸಂಚಿಕೆಯಲ್ಲಿ ಪ್ರಕಟವಾದ ಸಣ್ಣ ಕಥೆ ಮುಸ್ಲಿಂ ಬಾಂಧವರ ಅಸಂತೋಷಕ್ಕೆ ಕಾರಣವಾಗಿದೆ. ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಈ ತರಹ ಲೇಖನ ಹೇಗೆ ಪ್ರಕಟಣೆಯಾಯಿತು ಎಂಬುದು ತನಿಖೆ ಆಗಬೇಕು. ಪತ್ರಿಕಾ ಸಂಪಾದಕರು ಕ್ಷಮಾಯಾಚನೆಯನ್ನು ಕೇಳಿದ ಮೇಲೂ, ರಾಜ್ಯದ ಕೆಲವೆಡೆಗಳಲ್ಲಿ ಗಲಬೆ ನಡೆದಿರುವುದು ವಿಷಾದಕರ. ನಾಗರೀಕರ ಆಸ್ತಿಪಾಸ್ತಿಗಳನ್ನು ನಾಶ ಮಾಡಿರುವುದು ಖಂಡನೀಯ. ಮುಖ್ಯಮಂತ್ರಿಗಳು ಇದರ ಬಗ್ಗೆ ನ್ಯಾಯಾಂಗ ತನಿಖೆ ಮಾಡುತ್ತೇವೆಂದು ಹೇಳಿರುವುದರಿಂದ, ದುಷ್ಟ ಶಕ್ತಿಗಳು ದುರುಪಯೋಗ ಮಾಡಲು ಅವಕಾಶ ನೀಡಬಾರದೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಎಲ್ಲ ನಾಗರಿಕರಲ್ಲೂ ವಿನಂತಿಸುತ್ತದೆ.

ಸತ್ತವರ ಕುಟುಂಬಕ್ಕೂ, ಗಾಯಗೊಂಡವರಿಗೂ ತನ್ನ ಅನುಕಂಪವನ್ನು ಸೂಚಿಸುತ್ತದೆ.

ಎಸ್. ಎಫ್. ಐ. ರಾಜ್ಯ ಸಮಾವೇಶ

ಸಂಘಟನೆಯನ್ನು ವ್ಯಾಪಕವಾಗಿ ವಿಸ್ತರಿಸಲು ನಿರ್ಧಾರ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕರ್ನಾಟಕ ರಾಜ್ಯ ಸಮಾವೇಶವು 7-12-1986 ರಂದು ದ. ಕ. ಜಿಲ್ಲೆಯ ಮಂಗಳೂರಿನಲ್ಲಿ ಯಶಸ್ವಿಯಾಗಿ ನಡೆಯಿತು. ರಾಜ್ಯದ ಬಹುತೇಕ ಜಿಲ್ಲೆಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. 16 ವೀಕ್ಷಕರು ಮತ್ತು 100 ಆಯ್ದ ಪ್ರತಿನಿಧಿಗಳು ಭಾಗವಹಿಸಿದ್ದ ಸಮಾವೇಶವು ರಾಜ್ಯದಲ್ಲಿ ಸಂಘಟನೆಯನ್ನು ವ್ಯಾಪಕವಾಗಿ ವಿಸ್ತರಿಸಲು ನಿರ್ಧರಿಸಿತು.

7 ರಂದು ಬೆಳಿಗ್ಗೆ 9-30ಕ್ಕೆ ಎಸ್. ಎಫ್. ಐ. ಸ್ಥಾಪನಾ ರಾಷ್ಟ್ರ ಸಮ್ಮೇಳದಲ್ಲಿ ರಾಜ್ಯದಿಂದ ಪ್ರತಿನಿಧಿಯಾಗಿ ಭಾಗವಹಿಸಿದ್ದ ಚಂದ್ರಹಾಸ ರವರು ಧ್ವಜಾರೋಹಣ ಮಾಡುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಹುತಾತ್ಮರಿಗೆ ಗೌರವ ವಂದನೆ ಸಲ್ಲಿಸಿದ ನಂತರ ಆರಂಭವಾದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯ ಎಸ್. ಎಫ್. ಐ. ಅಧ್ಯಕ್ಷರಾದ ಆರ್. ಜಯಕುಮಾರ್ ವಹಿಸಿದ್ದರು. ಮಂಗಳೂರು ವಿಶ್ವ ವಿದ್ಯಾನಿಲಯದ ಕನ್ನಡ ಅಧ್ಯಾಪಕರಾಗಿರುವ ಡಾ|| ಪುರುಷೋತ್ತಮ ಬಿಳಿಮಲೆಯವರು ಸಮ್ಮೇಳನವನ್ನು ಉದ್ಘಾಟಿಸಿದರು. ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ–ಈಗಿನ ಭೂ ಮಾಲಕ–ಬಂಡವಾಳಶಾಹಿಗಳ ಹಿತಾಸಕ್ತಿಯನ್ನು ಕಾಪಾಡುತ್ತಿರುವ ಶಿಕ್ಷಣ ಪದ್ಧತಿಯ ಬದಲಾವಣೆಗಾಗಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸಂಘಟಿತರಾಗಿ ಹೋರಾಡಲು ಬಿಳಿಮಲೆಯವರು ಕರೆ ನೀಡಿದರು.

ಸಮಾವೇಶದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಿ. ಪಿ. ಐ. (ಎಂ) ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರ ರಾವ್ ರವರು ಮಾತನಾಡುತ್ತಾ "ವಿದ್ಯಾರ್ಥಿಗಳು

(ಕೊನೇ ಪುಟ ನೋಡಿ)

ಧಾರವಾಡದಲ್ಲಿ

ವಿಶ್ವ ಶಾಂತಿಗಾಗಿ ವರ್ಣಚಿತ್ರ ಜಾತಾ

ಜಗತ್ತನ್ನು ಯುದ್ಧದ ಅಪಾಯದಿಂದ ರಕ್ಷಿಸಿ ಶಾಂತಿಯನ್ನು ಉಳಿಸಿಕೊಳ್ಳಬೇಕೆಂಬ ಭಾವನೆಯನ್ನು ಜನಮನದಲ್ಲಿ ಜಾಗೃತಗೊಳಿಸುವ ದಿಕ್ಕಿನಲ್ಲಿ ಒಂದು ಕಾರ್ಯಕ್ರಮವನ್ನು ಸಮುದಾಯ ಸಾಂಸ್ಕೃತಿಕ ತಂಡ ರೂಪಿಸಿತು. ಕಲಾವಿದರಾದ ಸೊಲಬಕ್ಕನವರು ಮತ್ತು ಕರಿರಾಜು ಅವರು ರಚಿಸಿದ 1 20 ಅಡಿಗಳ ವರ್ಣ ಚಿತ್ರ ಪ್ರದರ್ಶನದ ಜಾಥಾ ಕಾರ್ಯಕ್ರಮ ಸೆಪ್ಟೆಂಬರ್ 7 ರಿಂದ ಪ್ರಾರಂಭವಾಗಿ 60 ದಿನಗಳ ಕಾಲ ರಾಜ್ಯಾದ್ಯಂತ ಯಶಸ್ವಿಯಾಗಿ ನಡೆಯಿತು. ಹುಬ್ಬಳ್ಳಿ–ಧಾರವಾಡಗಳಲ್ಲಿ ಈ ಕಾರ್ಯಕ್ರಮ ಅಕ್ಟೋಬರ್ 7, 8, ಮತ್ತು 9ರಂದು ಯಶಸ್ವಿಯಾಗಿ ನಡೆದ ಬಗ್ಗೆ ವರದಿಯಾಗಿದೆ.

ಅಕ್ಟೋಬರ್ 7ರಂದು ಧಾರವಾಡದ ಕಲಾಭವನದಲ್ಲಿ ನಡೆದ ವರ್ಣ ಚಿತ್ರ ಪ್ರದರ್ಶನವನ್ನು ಖ್ಯಾತ ಸಾಹಿತಿ ಬಸವರಾಜ ಕಟ್ಟೀಮನಿ ಅವರು ಉದ್ಘಾಟಿಸಿದರು. 5000 ವರ್ಷಗಳ ಮಾನವ ಇತಿಹಾಸ, ಜೈವಿಕ ವಿಕಾಸ, ಯುದ್ಧದ ಅಪಾಯ ಮತ್ತು ಶಾಂತಿಯ ಮಹತ್ವ ಮುಂತಾದ ವಿಷಯಗಳನ್ನು ಬೃಹತ್ ಗಾತ್ರದ ವರ್ಣ ಚಿತ್ರದಲ್ಲಿ ಸೆರೆಹಿಡಿದಿರುವುದು ಅದ್ಭುತವಾದ ಸಾಧನೆ, ವಿಶ್ವಶಾಂತಿಗಾಗಿ ಇದು ಸಾಂಸ್ಕೃತಿಕ ರಂಗದಲ್ಲಿ ಸಮುದಾಯದ ಮಹತ್ವದ ಕೊಡುಗೆ ಎಂದು ಅವರು ಪ್ರಶಂಸಿಸಿದರು.

ಅಕ್ಟೋಬರ್ 8ರಂದು ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಗಾಂಧಿ ಭವನದಲ್ಲಿ ನಡೆದ ವರ್ಣಚಿತ್ರ ಪ್ರದರ್ಶನವನ್ನು ಸ್ವಾಗತ ಸಮಿತಿಯ ಅಧ್ಯಕ್ಷ ಹಾಗೂ ವಿಶ್ವ ವಿದ್ಯಾನಿಲಯದ ಕುಲಪತಿ ಡಾ|| ಎಸ್. ಜಿ. ದೇಸಾಯಿ ಅವರು ಉದ್ಘಾಟಿಸುತ್ತಾ ವಿಶ್ವಶಾಂತಿಗಾಗಿ ಜನತೆಯ ಆಂದೋಲನ ಬಲಗೊಂಡು, ಅಣು ಅಸ್ತ್ರಗಳ ಸ್ಪೈಪೋಟಿ ತಡೆಯುವಲ್ಲಿ ಇಂತಹ ಕಾರ್ಯಕ್ರಮಗಳು ಪರಿಣಾಮಕಾರಿಯಾಗಲೆಂದು ಹಾರೈಸಿದರು.

ಅಕ್ಟೋಬರ್ 9ರಂದು ಹುಬ್ಬಳ್ಳಿಯ ಗಾಜಿನ ಮನೆಯಲ್ಲಿ ನಡೆದ ವರ್ಣಚಿತ್ರ ಪ್ರದರ್ಶನವನ್ನು ನಗರ ಸಭಾಧ್ಯಕ್ಷ ಪಿ. ಎಚ್. ಪವಾರ್ ಉದ್ಘಾಟಿಸಿದರು. ಚಿತ್ರ ಪ್ರದರ್ಶನಕ್ಕೆ ನಗರದ ಏಳು ಲಕ್ಷ ಜನರ ಪರವಾಗಿ ಶುಭಾಶಯ ಕೋರಿದರು. ಜಿಲ್ಲಾ ಜನತಾ ಪಕ್ಷದ ಅಧ್ಯಕ್ಷ ಹಾಗೂ ಸ್ಥಳೀಯ ಸ್ವಾಗತ ಸಮಿತಿ ಅಧ್ಯಕ್ಷ ಎಸ್.ಪಿ. ಶೆಟ್ಟರ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಶಾಂತಿಯ ಮಹತ್ವ ಮತ್ತು ಯುದ್ಧದ ಅಪಾಯಗಳ ಕುರಿತು ಈ ಕಲಾಕೃತಿ ಪರಿಣಾಮಕಾರಿಯಾಗಿ ತಿಳಿಸುತ್ತದೆ ಎಂದು ಹೇಳಿದರು. ವಿಧಾನ ಸಭಾ ಸದಸ್ಯ ಎ. ಎಂ. ಹಿಂಡಸಗೇರಿ ಮುಖ್ಯ ಅತಿಥಿಗಳಾಗಿ ಶುಭ ಕೋರಿದರು.

ವರ್ಣಚಿತ್ರ ಪ್ರದರ್ಶನದ ಮೂರು ದಿನಗಳಲ್ಲಿಯೂ ಪುರೋಗಾಮಿ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟ, ಚಿದಾನಂದ ತೆಗ್ಗಿಹಳ್ಳಿಯವರ 50ಕ್ಕೂ ಹೆಚ್ಚು ಯುದ್ಧ ವಿರೋಧೀ ಭಿತ್ತಿಪತ್ರಗಳ ಪ್ರದರ್ಶನ ನಡೆ

ಈ ಅಪೂರ್ವ ಜಾಥಾ ಧಾರವಾಡ ಹುಬ್ಬಳ್ಳಿಯ ಜನತೆಯಲ್ಲಿ ಸಂಭ್ರಮವನ್ನು ಮೂಡಿಸಿತು ಅದೊಂದು ಹಬ್ಬದಂತೆ ಆಚರಿಸಲ್ಪಟ್ಟಿತು.

ಯಿತು. ಕರ್ನಾಟಕ ವಿಶ್ವವಿದ್ಯಾನಿಲಯದ ಶಿಕ್ಷಕೇತರ ಸಂಘದ ಸಾಂಸ್ಕೃತಿಕ ವೇದಿಕೆ, ಸಮುದಾಯ, ಭಾರತ ವಿದ್ಯಾರ್ಥಿ ಹಾಗೂ ಯುವಜನ ಫೆಡರೇಶನ್‌ಗಳ ಕಲಾವಿದರು ಯುದ್ಧ ವಿರೋಧಿ ಗೀತೆಗಳನ್ನು ಹಾಡಿದರು ಕ. ವಿ. ವಿ. ವಿದ್ಯಾರ್ಥಿಗಳಿಂದ ಕಿರು ನಾಟಕಗಳ ಪ್ರದರ್ಶನ ನಡೆಯಿತು.

ಕಾರ್ಯಕ್ರಮದ ಪೂರ್ವಭಾವಿ ಸಿದ್ಧತೆಗಾಗಿ ಒಂದು ಕ್ರಿಯಾ ಸಮಿತಿ ಹಾಗೂ ಮೂರು ಸ್ವಾಗತ ಸಮಿತಿ ರಚನೆಯಾಗಿದ್ದು ಇದರಲ್ಲಿ ನೂರು ಮಂದಿ ಕಾರ್ಯಕರ್ತರು ನಲವತ್ತು ದಿನಗಳ ಕಾಲ ಶ್ರಮಿಸಿದ್ದಾರೆ. 1000 ಭಿತ್ತಿಪತ್ರಗಳನ್ನು 5000 ವಿಶೇಷ ಕರಪತ್ರಗಳನ್ನು 15,000 ಸಾಮಾನ್ಯ ಕರ ಪತ್ರಗಳನ್ನು, ಪ್ಲಕಾರ್ಡ್ ಬ್ಯಾನರುಗಳನ್ನು ಪ್ರಚಾರಕ್ಕಾಗಿ ಬಳಸಲಾಗಿತ್ತು, ನಗರದ ವಿವಿಡೆಗಳಲ್ಲಿ ಸಾರ್ವಜನಿಕ ಸಭೆಗಳು, ವಿಚಾರ ಸಂಕಿರಣಗಳು ನಡೆದಿದ್ದವು. ಕ.ವಿ.ವಿ ಯ ಭೌತಶಾಸ್ತ್ರ ಅಧ್ಯಾಪಕರಾದ ಸಂಪಿಗೆ ತೋಂಟದಾರ್ಯ ಮತ್ತು ಸಮುದಾಯ ಕೇಂದ್ರ ಸಮಿತಿ ಸದಸ್ಯರಾದ ಸಿ ಆರ್ ಭಟ್ ಅವರುಗಳು ಕ್ರಿಯಾ ಸಮಿತಿಯ ಅಧ್ಯಕ್ಷ ಹಾಗೂ ಸಂಚಾಲಕರಾಗಿ ಈ ಜಾಥಾದ ಯಶಸ್ಸಿಗೆ ಹಗಲಿರುಳೂ ದುಡಿದಿದ್ದಾರೆ.

ಕಾಂ. ಶ್ರೀರಾಮ ರೆಡ್ಡಿ

7-12-86ರ ಐಕ್ಯರಂಗ ಸಂಚಿಕೆಯಲ್ಲಿ ಪ್ರಕಟವಾದ ಲಂಕೇಶ್ ಪತ್ರಿಕೆಯ ದೀಪಾವಳಿ ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ ಮಾಲಾ ಮಂಜುನಾಥ್ ರವರ ಲೇಖನಕ್ಕೆ ಮಾರೋಲೆ ಬರೆದವರು ಕಾಂ. ಜಿ. ವಿ. ಶ್ರೀರಾಮ ರೆಡ್ಡಿ. ಹೆಸರು ಕೈತಪ್ಪಿನಿಂದಾಗಿ ಬಿಟ್ಟು ಹೋಗಿರುವುದಕ್ಕೆ ವಿಷಾದಿಸುತ್ತೇವೆ.

'ಐಕ್ಯರಂಗ'

ಜಿಲ್ಲಾ ಪರಿಷತ್ ಮಂಡಲ ಪಂಚಾಯತ್

ಚುನಾವಣಾ ಪ್ರಣಾಳಿಕೆ

ಮತದಾರ ಬಂಧುಗಳೇ,

ಕರ್ನಾಟಕದಲ್ಲಿ ಮೊದಲ ಬಾರಿಗೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಗಳಿಗೆ ಚುನಾವಣೆ ನಡೆಯುತ್ತಿದೆ. ಈ ಚುನಾವಣೆಯಿಂದ ರಚಿಸಲ್ಪಡುವ ಜಿಲ್ಲಾ ಪರಿಷತ್ ಮಂಡಲ ಪಂಚಾಯತುಗಳು ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಆಡಳಿತ-ಅಭಿವೃದ್ಧಿ ಕೆಲಸಗಳಲ್ಲಿ, ಸಾರ್ವಜನಿಕರ ಪಾಲುಗೊಳ್ಳುವಿಕೆ, ಇತ್ಯಾದಿ ವಿಷಯುಗಳಲ್ಲಿ ಮಹತ್ತರವಾದ ಪಾತ್ರ ವಹಿಸಲಿವೆ.

ಹಿಂದೆ ಇದ್ದಂತಹ ಪಂಚಾಯತು-ತಾಲ್ಲೂಕು ಬೋರ್ಡುಗಳಿಗಿಂತ ಹೆಚ್ಚು ಅಧಿಕಾರ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತುಗಳಿಗೆ ಸಿಗುತ್ತದೆ. ಅನೇಕ ಕೆಲಸಗಳಿಗಾಗಿ ರಾಜ್ಯದ ರಾಜಧಾನಿಗೆ ಬರಬೇಕಾದ ಅವಶ್ಯಕತೆ ತಪ್ಪಿ ಜಿಲ್ಲಾ ಮಟ್ಟದಲ್ಲಿಯೇ, ಮಂಡಲ ಪಂಚಾಯತಿ ಮಟ್ಟದಲ್ಲಿಯೇ ಕೆಲಸವಾಗಲು ಅವಕಾಶವಿದೆ. ಗ್ರಾಮೀಣ ಪ್ರದೇಶದ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚು ಹೆಚ್ಚು ಹಣ ದೊರಕಲಿದೆ.

ನವಲಗುಂದ, ನರಗುಂದಗಳ ರೈತ ಹೋರಾಟಗಳು, ಬಿಜಾಪುರ, ರಾಯಚೂರು, ಗುಲ್ಬರ್ಗ, ಕೋಲಾರ, ಬಳ್ಳಾರಿ, ದಕ್ಷಿಣಕನ್ನಡ, ಬೆಂಗಳೂರು, ತುಮಕೂರು ಜಿಲ್ಲೆ ಮತ್ತು ಇತರ ಕಡೆ ನಡೆದ ರೈತರ ಹೋರಾಟಗಳು, ಕಾರ್ಮಿಕರ ಹೋರಾಟಗಳು 35 ವರ್ಷಗಳಿಂದ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷವನ್ನು ಅಲುಗಾಡಿಸಿ ಜನತಾ ಪಕ್ಷದ ಸರ್ಕಾರವು ಅಧಿಕಾರಕ್ಕೆ ಬಂದಿತು.

ಜನತಾ ಪಕ್ಷದ ಸರ್ಕಾರವು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ ಕಾಯಿದೆಯನ್ನು ತರುವುದರಲ್ಲಿ ಕರ್ನಾಟಕದ ಜನತೆ—ರೈತರು, ಕಾರ್ಮಿಕರು, ವಿದ್ಯಾರ್ಥಿ ಯುವಜನರು ಮುಖ್ಯ ಪಾತ್ರವನ್ನು ವಹಿಸಿದರು. ಮೇಲೆ ಹೇಳಿದ ಹೋರಾಟಗಳಲ್ಲಿ ಮತ್ತು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ ಮಸೂದೆಯ ಮೇಲೆ ವಿಧಾನ ಸಭೆ ನೇಮಿಸಿದ ಸೆಲೆಕ್ಟ್ ಕಮಿಟಿಯಲ್ಲಿ ಸಿ.ಪಿ.ಐ (ಎಂ) ಮುಖ್ಯ ಪಾತ್ರವನ್ನು ವಹಿಸಿದೆ. ಕರ್ನಾಟಕದ ವಿಧಾನ ಸಭೆ ಅಂಗೀಕರಿಸಿದ ಈ ಮಸೂದೆಗೆ ರಾಷ್ಟ್ರಾಧ್ಯಕ್ಷರ ಅಂಗೀಕಾರ ಮುದ್ರೆ ಸಿಕ್ಕುವುದರಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷ ಎರಡು ವರ್ಷ ತಡೆಹಿಡಿಯಿತು. ಈ ಮಸೂದೆಗೆ ಅಂಗೀಕಾರ ಪಡೆಯುವುದರಲ್ಲಿ ಸಿ ಪಿ ಐ.(ಎಂ) ಮತ್ತು ಸಾಮೂಹಿಕ ಸಂಘಟನೆಗಳ ಹೋರಾಟವು ಗಣನೀಯವಾಗಿದ್ದಿತು

ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿತ ಹಿತಾಸಕ್ತಿಗಳ ಆಡಳಿತ ಗುತ್ತಿಗೆಯನ್ನು ಮುರಿಯುವುದರಲ್ಲಿ, ಅಧಿಕಾರ ವಿಕೇಂದ್ರೀಕರಿಸುವುದರಲ್ಲಿ ಹಾಗೂ ನಿಜಕ್ಕೂ ಬಡರೈತ ಮತ್ತು ಕಾರ್ಮಿಕ ಪ್ರತಿನಿಧಿಗಳು ಬಹುದೊಡ್ಡ ಸಂಖ್ಯೆಯಲ್ಲಿ ಆರಿಸಿ ಬಂದು ಆಡಳಿತ ನಡೆಸುವುದರಲ್ಲಿ-ಪಶ್ಚಿಮ ಬಂಗಾಳದ ಸಿ.ಪಿ.ಐ (ಎಂ) ನೇತೃತ್ವದ ಎಡರಂಗ ಸರ್ಕಾರವು ಹಲವು ರೀತಿಯಲ್ಲಿ ಮಾರ್ಗದರ್ಶಕವಾಗಿದೆ.

ಕಾಂಗ್ರೆಸ್ಸು ಸರಕಾರದ ಕಳೆದ 40 ವರ್ಷಗಳ ಆಡಳಿತೆಯಲ್ಲಿ ರೈತಾಪಿ ಜನರ ಯಾವ ಸಮಸ್ಯೆಗಳೂ ಬಗೆಹರಿಯಲಿಲ್ಲ.

ಜಿಲ್ಲಾ ಪರಿಷತ್ ಚುನಾವಣೆಗಳ ಕಡೆಗೆ ಇಡೀ ಕರ್ನಾಟಕವೇ ಹೆಜ್ಜೆ ಹಾಕುತ್ತಿದೆ. ನಾಮಪತ್ರ ಸಲ್ಲಿಕೆ ಈಗಾಗಲೇ ಆರಂಭವಾಗಿದೆ. ದುಡಿಯುವ ಎಲ್ಲಾ ಜನವರ್ಗದ ಪ್ರತಿನಿಧಿಯಾದ ರೈತ, ಕೃಷಿ ಕಾರ್ಮಿಕರ ಹಿತಕ್ಕಾಗಿ ಅನೇಕ ಹೋರಾಟಗಳನ್ನು ನಿರಂತರವಾಗಿ ನಡೆಸಿರುವ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಹತ್ತಾರು ಜಿಲ್ಲೆಗಳಲ್ಲಿ ಸ್ಪರ್ಧಿಸುತ್ತಿದೆ. ಇದೋ ನೋಡಿ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಚುನಾವಣಾ ಪ್ರಣಾಳಿಕೆ.

ಅವರ ಧೋರಣೆಯಿಂದಾಗಿ ರೈತರು ಭೂಮಿ ಕಳೆದುಕೊಳ್ಳುತ್ತಿದ್ದಾರೆ, ನಿರ್ಗತಿಕರಾಗುತ್ತಿದ್ದಾರೆ. ಕೃಷಿ ಕಾರ್ಮಿಕರ ಸಂಖ್ಯೆ ತೀವ್ರ ಗತಿಯಲ್ಲಿ ಹೆಚ್ಚಿ ಅವರಲ್ಲಿ ಅಧಿಕ ಮಂದಿಗೆ ಕೆಲಸವಿಲ್ಲದಂತಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಅವಶ್ಯ ವಸ್ತುಗಳು ಪೂರೈಸಲ್ಪಡುತ್ತಿಲ್ಲ. ರಸ್ತೆ, ಆಸ್ಪತ್ರೆ, ಶಾಲೆ, ನೀರು, ದೀಪ, ಮನೆ ವ್ಯವಸ್ಥೆಯಿಲ್ಲ. ನಿರುದ್ಯೋಗ, ಅರೆ-ನಿರುದ್ಯೋಗ ತಾಂಡವವಾಡುತ್ತಿದೆ. ರಾಜೀವ್ ಗಾಂಧಿಯವರ ಹೊಸ ಆರ್ಥಿಕ ನೀತಿ, ಜವಳಿ ನೀತಿಗಳೆಲ್ಲ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತಿದೆ.

ಕೊಳವೆ ಭಾವಿಗಳನ್ನು ತೆಗೆಯುವುದರಲ್ಲೂ, ವಿಧವೆಯರಿಗೆ ಮಾಸಾಶನ ಕೊಡುವುದರಲ್ಲೂ ಜನತಾ ಸರ್ಕಾರ ಸ್ವಲ್ಪ ಕೆಲಸ ಮಾಡಿರುವುದಾದರೂ, ಜನತಾ ಪಕ್ಷದ ಸರ್ಕಾರವು ತಮ್ಮ ರಾಜ್ಯದಲ್ಲಿ ಕಾಂಗ್ರೆಸ್ಸಿಗಿಂತ ಬಹಳಷ್ಟು ಭಿನ್ನವಾದ ಜನ ಪರವಾದ ಸಮರ್ಥ ಆಡಳಿತ ಒದಗಿಸುವುದರಲ್ಲಿ ವಿಫಲಗೊಂಡಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಜನಜೀವನ ಇನ್ನಷ್ಟು ಹದಗೆಟ್ಟಿದೆ. ಸ್ಥಾಪಿತ ಹಿತಾಸಕ್ತಿಗಳ ಹಿಡಿತ ಮೊದಲಿನಂತೆಯೇ ಮುಂದುವರಿದಿದೆ.

ಹಿಂದಿನ ಕಾಂಗ್ರೆಸ್ಸ್ ಸರ್ಕಾರ ಜನರಿಗೆ ಹಲವಾರು ಆಶ್ವಾಸನೆಗಳನ್ನು ಕೊಟ್ಟು ಭ್ರಮೆಯುಂಟು ಮಾಡಿತ್ತು. ಈಗಿನ ಜನತಾ ಸರ್ಕಾರವೂ ಅಂತಹದೇ ಭ್ರಮೆ ಹುಟ್ಟಿಸುವ ಭರವಸೆಗಳನ್ನು ಕೊಡುವುದರಲ್ಲಿ ನಿರತವಾಗಿದೆಯೇ ವಿನಹ, ಜನರನ್ನು ತಮ್ಮ ಕಾಲುಗಳ ಮೇಲೆ ನಿಲ್ಲಿಸುವ ಆರ್ಥಿಕ ಕ್ರಮಗಳನ್ನು ಅನುಸರಿಸುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಮನೆಗೆ ಒಂದು ಕೆಲಸ ಒದಗಿಸುವ ಜನತಾ ಪಕ್ಷದ ಭರವಸೆ ಕೇವಲ ಭರವಸೆಯಾಗಿಯೇ ಉಳಿದಿದೆ. ಮಾತ್ರವಲ್ಲ, ಸರ್ಕಾರಿ ವಲಯಗಳಲ್ಲಿ ಹತ್ತಾರು ವರ್ಷಗಳಿಂದ ಖಾಲಿಬಿದ್ದ 80,000 ಕ್ಕೂ ಅಧಿಕ ಖಾಲಿ ಹುದ್ದೆಗಳು ಇನ್ನೂ ಭರ್ತಿಯಾಗಲಿಲ್ಲ. ಗ್ರಾಮಾಂತರ ಪ್ರದೇಶಗಳ ಜನರಿಗೆ ದರಖಾಸ್ತು ಭೂಮಿ, ಮನೆ ನಿವೇಶನ ಕೊಡುವ ವಿಷಯದಲ್ಲಾಗಲೀ, ಆಕ್ರಮಿತ ಭೂಮಿಯನ್ನು ಸಕ್ರಮಗೊಳಿಸುವ ಪ್ರಶ್ನೆಯಲ್ಲಾಗಲೀ, ಭೂ ಸುಧಾರಣೆ ಕಾಯ್ದೆಯ ಮೂಲಕ ಭೂಮಿ ಸಿಕ್ಕದ ರೈತರಿಗೆ "ಒಡೆತನದ ಪಟ್ಟಾ ಪತ್ರ" ಕೊಡುವುದರಲ್ಲಾಗಲೀ ಇನ್ನೂ ಮೀನಾ ಮೇಷ ನಡೆಯುತ್ತದೆ. ಭರವಸೆಗಳು ಕೇವಲ ಬಾಯ್ಮಾತಾಗಿಯೇ ಉಳಿದಿದೆ.

ಗ್ರಾಮಾಂತರ ಜನತೆಗೆ ಆವಶ್ಯಕ ವಸ್ತುಗಳನ್ನು—ಹೆಚ್ಚು ಆಹಾರ ಧಾನ್ಯ, ಬೇಳೆ ಕಾಳು, ಎಣ್ಣೆ, ಸೀಮೆಎಣ್ಣೆ ಇತ್ಯಾದಿ—ನ್ಯಾಯ ದರದಲ್ಲಿ ಒದಗಿಸುವ ಸಾರ್ವತ್ರಿಕ ವಿತರಣಾ ವ್ಯವಸ್ಥೆಯಂತೂ ಕನಸಿನ ಗಂಟಾಗಿದೆ.

ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಎಡರಂಗ ಸರ್ಕಾರಗಳು ಅಧಿಕಾರಕ್ಕೆ ಬಂದ ಪಶ್ಚಿಮ ಬಂಗಾಳ ಮತ್ತು ತ್ರಿಪುರ ರಾಜ್ಯಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸಾರ್ವಜನಿಕ ವ್ಯವಸ್ಥೆಯು ಸದೃಢವಾಗಿ ಏರ್ಪಟ್ಟು ಅವಶ್ಯಕವಾದ ಕೆಲವು ವಸ್ತುಗಳು ನ್ಯಾಯ ಬೆಲೆಯಲ್ಲಿ ಸರ್ವಕಾಲವೂ ಗ್ರಾಮಾಂತರ ಜನತೆಗೆ ಸಿಗುವಂತೆ ಮಾಡಲು ಸಾಧ್ಯವಾಗಿದೆ

ಸರಕಾರದಿಂದ ಒದಗಿಸಲ್ಪಡುವ ಹಣ ಜನರ ಪರವಾಗಿ ವ್ಯಯವಾಗಬೇಕಾದರೆ, ಪಟ್ಟಭದ್ರ ಹಿತಾಸಕ್ತಿಗಳ ಹಿಡಿತ ಕಡಿಮೆಯಾಗಬೇಕಾದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮತ್ತು ಆದರ ಬೆಂಬಲಿತ ರೈತ-ಕಾರ್ಮಿಕ ಪ್ರತಿನಿಧಿಗಳು ಆರಿಸಿ ಬರುವುದು ಆತ್ಯಗತ್ಯ.

ಮನೆ ನಿವೇಶನ, ದರ್ಖಾಸ್ತು ಭೂಮಿ, ಆಕ್ರಮ ಭೂಮಿ ಸಕ್ರಮಗೊಳಿಸುವ ಕೆಲಸವು ಬಹಳಷ್ಟು ಪ್ರಮಾಣದಲ್ಲಿ ಕೈ ಗೂಡಿದೆ. ಅಲ್ಲದೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತುಗಳ ಮೂಲಕ ರಾಜ್ಯ ಸರ್ಕಾರವು ಎಲ್ಲಾ ಧೋರಣೆಗಳನ್ನು ಕಾರ್ಯಗತಗೊಳಿಸುತ್ತಿದೆ. 16 ಲಕ್ಷ ಜನರಿಗೆ ಭೂಮಿ ಹಂಚಿಕೆ. 13 ಲಕ್ಷ ಜನರ ರಿಕಾರ್ಡ್ಸ್ ಆಫ್ ರೈಟ್ಸ್ ಸ್ಥಿರ ಮಾಡಿದೆ. 2 ಲಕ್ಷ ಜನರಿಗೆ ನಿವೇಶನ ನೀಡಿದೆ. ಕೆಲಸ ಕಾರ್ಯಕ್ರಮಗಳನ್ನು ಅಧಿಕಾರಿಗಳ ಮೂಲಕವೇ ಸದಸ್ಯರೇ ಮಾಡಿಸುತ್ತಿದ್ದಾರೆ. ಪಂಚಾಯತುಗಳ ಮೂಲಕವೇ ಬಡವರನ್ನು ಗುರ್ತಿಸಿ ಯಾವ ತೊಂದರೆಗಳಿಲ್ಲದೆ ಅವರಿಗೆ ಬ್ಯಾಂಕ್ ಸಾಲ ಒದಗಿಸಿದೆ.

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು ಕಾರ್ಮಿಕ ಮತ್ತು ರೈತ ವಿಭಾಗಗಳನ್ನು ಪ್ರತಿನಿಧೀಕರಿಸುವ ಗ್ರಾಮಾಂತರ ಪ್ರದೇಶಗಳಲ್ಲಿ ರೈತರನ್ನು ಸಂಘಟಿಸಿ ರೈತರ ಗ್ರಾಮ ಘಟಕಗಳ ಮೂಲಕ ಶ್ರೀಸಾಮಾನ್ಯರು ಚುನಾವಣೆಯಲ್ಲಿ ಸ್ಪರ್ಧಿಸಲು ಸ್ಫೂರ್ತಿ, ಧೈರ್ಯ ಕೊಟ್ಟು ಸ್ಥಳೀಯ ಆಡಳಿತೆಯಲ್ಲಿ ಅವರು ಕ್ರಿಯಾಶೀಲರಾಗಿ ಕೆಲಸ ಮಾಡುವಂತೆ ಮಾಡಲು ಸಾಧ್ಯವಾಗಿದೆ.

ಆದರೆ ಕಾಂಗ್ರೆಸ್ಸ್ ಪಕ್ಷ ಮತ್ತು ಜನತಾ ಪಕ್ಷ ಎರಡೂ ಬಂಡವಾಳಶಾಹಿ ಮತ್ತು ಜಮೀನ್ದಾರ ವರ್ಗಗಳ ಸ್ಥಾಪಿತ ಹಿತ

6ನೇ ಪುಟ ನೋಡಿ

ಪ. ಬಂಗಾಳ

ಎಡರಂಗ ಚುನಾವಣಾ ಪ್ರಚಾರದ ಉದ್ಘಾಟನೆ

ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಬೃಹತ್ತಾದ ಮೆರವಣಿಗೆ ಹಾಗೂ ಸಭೆಯನ್ನು ಸಂಘಟಿಸುವುದರ ಮೂಲಕ ಎಡರಂಗ ಪಕ್ಷಗಳು ಐಕ್ಯತೆಯಿಂದ ತಮ್ಮ ಚುನಾವಣಾ ಪ್ರಚಾರವನ್ನು ಉದ್ಘಾಟಿಸಿದುವು.

ಎಡರಂಗದ ಅಧ್ಯಕ್ಷ ಕಾಂ. ಸರೋಜ್ ಮುಖರ್ಜಿಯವರು "1972 ರಿಂದ 1977 ರವರೆಗೆ ಪ. ಬಂಗಾಳದಲ್ಲಿ ದಿನನಿತ್ಯ ಕೊಲೆಗಳು, ಭಯೋತ್ಪಾದನೆ, ದಂಗೆಗಳು ಜನರನ್ನು ಕಂಗೆಡಿಸಿದ್ದುವು. ಇಂದೂ ಕೂಡ ಕಾಂಗ್ರೆಸ್ ಆಡಳಿತದ ರಾಜ್ಯಗಳಲ್ಲಿ ಜಾತಿ ಜಗಳಗಳು ಮತೀಯ ದಂಗೆಗಳು ದಿನನಿತ್ಯದ ಮಾತಾಗಿವೆ. ಕಾರ್ಮಿಕರು, ರೈತರ ಮೇಲೆ ಧಾಳಿಗಳು ಹೆಚ್ಚುತ್ತಿವೆ.

ಕಾಂಗ್ರೆಸ್ (ಐ) ಪಕ್ಷದ ಪ್ರಜಾಪ್ರಭುತ್ವ ವಿರೋಧಿ, ಜನ ವಿರೋಧಿ ನೀತಿಗಳಿಗೆ ಸರಿಯಾದ ಉತ್ತರವನ್ನು ನೀಡುವ ಒಂದು ವ್ಯವಸ್ಥಿತ ಪ್ರಯತ್ನ ಈ ಚುನಾಗಳಲ್ಲಿ ಆಗಬೇಕು" ಎಂದರು.

ಈ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಕಾಂ. ಜ್ಯೋತಿ ಬಸುರವರು ಎಡರಂಗವನ್ನು ಸ್ಥಾಪಿಸಲು ಜನತೆ ಅಪಾರವಾದ ತ್ಯಾಗ ಬಲಿದಾನಗಳನ್ನು ಮಾಡಬೇಕಾಯಿತು. ಹಿಂಸೆ, ಜೈಲುವಾಸಗಳನ್ನು ಅನುಭವಿಸಬೇಕಾಯಿತು. ಅನೇಕರು ಹುತಾತ್ಮರಾಗಬೇಕಾಯಿತು. ಇಂತಹ ಎಡರಂಗ ಸಂಪನ್ಮೂಲಗಳ ಕೊರತೆಯಿಂದ ತೊಂದರೆ ಅನುಭವಿಸಿದರೂ ಪ್ರಗತಿಯನ್ನು ಸಾಧಿಸಿದೆ. ಈ ಸರ್ಕಾರ ಪ. ಬಂಗಾಳದ ಜನತೆಗೆ ಮಾತ್ರವಲ್ಲ ಇಡೀ ದೇಶದ ಜನತೆಗೊಂದು ಆಶಾಕಿರಣವಾಗಿದೆ. ಇಡೀ ದೇಶದ ಶೋಷಿತ ಜನತೆ, ಹಿಂಸೆಗೊಳಗಾದ ಜನತೆ ಇತ್ತ ನೋಡುತ್ತಿದ್ದಾರೆ ಎಂದರು.

ಈ ಎಡ ಸರ್ಕಾರದ ಸಾಧನೆಗಳನ್ನು ಅಳೆಯುವುದು ಹೇಗೆ? ಎಂದು ಪ್ರಶ್ನಿಸಿದ ಕಾಂ. ಬಸು ಈ ರಾಜ್ಯದಲ್ಲಿ 29½ ವರ್ಷದ ಕಾಂಗ್ರೆಸ್ ಆಡಳಿತ, ಇತರ ರಾಜ್ಯಗಳಲ್ಲಿ 39 ವರ್ಷಗಳ ಕಾಂಗ್ರೆಸ್ ಆಡಳಿತದ ಸಾಧನೆಯ ಜೊತೆಗೆ ತುಲನೆ ಮಾಡಿಯೇ ನಮ್ಮ ಸರ್ಕಾರದ ಸಾಧನೆಗಳನ್ನು ಅಳೆಯಬೇಕು ಎಂದರು.

ಕೇಂದ್ರ ಸರ್ಕಾರದ ಅನಿಯಮಿತ ಸಂಪನ್ಮೂಲಗಳನ್ನು ಪಟ್ಟ ಭದ್ರ ಹಿತಗಳಿಗೆ ಆಹಾರವಾಗಿಸುತ್ತಿರುವುದರ ಬಗ್ಗೆ, ಪ. ಬಂಗಾಳ ರಾಜ್ಯಕ್ಕೆ ಬೃಹತ್ ಕೈಗಾರಿಕೆ, ಮಧ್ಯಮ ಕೈಗಾರಿಕೆಗಳಿಗೆ ಲೈಸೆನ್ಸ್ ನೀಡಿಕೆಯಲ್ಲಿ ಅನ್ಯಾಯ ಮಾಡುತ್ತಿರುವುದರ ಬಗ್ಗೆ ಪ್ರಸ್ತಾಪಿಸಿದರು. ಪಕ್ಷದ ಬಗ್ಗೆ ನಡೆಯುವ ಬೃಹತ್ತಾದ ಅಪಪ್ರಚಾರದ ಬಗ್ಗೆ ತಿಳಿಯಬೇಕಾದರೆ ಪಕ್ಷದ ಪತ್ರಿಕೆ "ಗಣಶಕ್ತಿ"ಯನ್ನು ಜನ ಓದಬೇಕು, ಪಕ್ಷದ ಪ್ರಕಟಣೆಗಳನ್ನು ಓದಬೇಕು ಎಂದು ಕರೆ ನೀಡಿದರು. ★

ವಿವಿಧ ರಾಜ್ಯಗಳಲ್ಲಿ

ಪಂಜಾಬ್ : ಕೋಮು ಸೌಹಾರ್ದತೆಗೆ ರ್‍ಯಾಲಿ ಪ್ರಚಾರ

ಖಲಿಸ್ತಾನ್ ಉಗ್ರಗಾಮಿಗಳ ಗುಂಡೇಟುಗಳಿಂದ ರಕ್ತಸಿಕ್ತವಾದ ಜಲಂಧರ್ ನಗರದಲ್ಲಿ, ಸಾವಿರಾರು ಜನರ ಒಕ್ಕೊರಲಿನ—"ಹಿಂದೂ-ಸಿಖ್ ಐಕ್ಯತೆ ಚಿರಾಯುವಾಗಲಿ" "ಹಿಂದೂ ರಾಜ್ ಬೇಡ, ಖಲಿಸ್ತಾನ ಸಹ ಬೇಡ, ಹಿಂದೂಸ್ತಾನ ಚಿರಾಯುವಾಗಲಿ" "ಸಾಮ್ರಾಜ್ಯಶಾಹಿಗಳಿಗೆ ಧಿಕ್ಕಾರ" "ಎಲ್ಲ ಜಾತಿಯ ಕೋಮುವಾದಿಗಳಿಗೆ ಧಿಕ್ಕಾರ"—ಈ ಘೋಷಣೆಗಳು ಜನರನ್ನು ರೋಮಾಂಚನಗೊಳಿಸಿದವು. ನವೆಂಬರ್ 9 ರಂದು ಪಂಜಾಬಿನ ಸರ್ಕಾರಿ ಶಾಲಾ ಶಿಕ್ಷಕರ ಯೂನಿಯನ್‌ನ (ಜಿ.ಟಿ.ಯು.) ಸಮಾವೇಶದ ಸಂದರ್ಭದಲ್ಲಿ ಏರ್ಪಡಿಸಿದ್ದ-ನೂರಾರು ಶಿಕ್ಷಕಿಯರು ಸೇರಿದಂತೆ 10,000 ಶಿಕ್ಷಕರು ಭಾಗವಹಿಸಿದ್ದ-ಮೆರವಣಿಗೆಯಲ್ಲಿ ಈ ಘೋಷಣೆಗಳು ಕೇಳಿ ಬಂದವು. ಪಂಜಾಬ್ ಒಪ್ಪಂದವನ್ನು ಕಾರ್ಯಗತಗೊಳಿಸುವಂತೆ ಸಹ ಒತ್ತಾಯ ತರಲಾಯಿತು. ಇದರ ಜತೆಗೆ ಈ ಶಿಕ್ಷಕರು ತಮ್ಮ ಆರ್ಥಿಕ, ಶೈಕ್ಷಣಿಕ, ಪ್ರಜಾಸತ್ತಾತ್ಮಕ ಬೇಡಿಕೆಗಳನ್ನು ಬಿಂಬಿಸುವ ಬ್ಯಾನರ್‌ಗಳನ್ನು ಹಿಡಿದಿದ್ದರು.

ಅಗತಾನೆ ಮುಗಿದಿದ್ದ ಜಿ.ಟಿ.ಯು.ನ ಸಮಾವೇಶ ಒಂದು ಲಕ್ಷ ಶಿಕ್ಷಕರ ಸದಸ್ಯತ್ವವುಳ್ಳ ಜಿ. ಟಿ. ಯು. ನ 7ನೇ ಜನರಲ್ ಕೌನ್ಸಿಲ್ ಚುನಾವಣೆ ಬಹಳ ಮಹತ್ವಪೂರ್ಣವಾಗಿತ್ತು. ತನ್ನ ಸರಿಯಾದ ನೀತಿಗಳಿಂದ ಶಿಕ್ಷಕರಿಗೆ ಪ್ರಿಯರಾಗಿ ಜಿ. ಟಿ. ಯು. ಚುನಾವಣೆಗಳಲ್ಲಿ ಸತತವಾಗಿ ಗೆಲ್ಲುತ್ತಾ ಬಂದಿರುವ ಸಿ. ಐ. ಟಿ. ಯು. ನಾಯಕತ್ವದ ಗುಂಪನ್ನು ಕೆಳಗಿಳಿಸಲು ಸಾಧ್ಯವಾಗದೆ, ಎ. ಐ. ಟಿ. ಯು. ಸಿ ನಾಯಕತ್ವದ ಧಿಲ್ಲೋನ್ ಗುಂಪು ಮತ್ತು ದುಸ್ಸಾಹಸವಾದಿ ಲಾಂಬಿ ಗುಂಪುಗಳು ಜಿ. ಟಿ. ಯು. ನಿಂದ ಹೊರನಡೆದು, ಸಂಘಟನೆಯನ್ನು ಒಡೆಯಲು ಪ್ರಯತ್ನಗಳು ನಡೆದಿದ್ದವು. ಈ ಹಿನ್ನೆಲೆಯಲ್ಲಿ ಈ ಸಮಾವೇಶ ನಡೆಯಿತು. ಸಂಘಟನೆಯ ಐಕ್ಯತೆಯನ್ನು ಉಳಿಸಿಕೊಳ್ಳುವ ಸಿ ಐ ಟಿ. ಯು. ಪ್ರಯತ್ನ ಸಫಲವಾಗಲಿಲ್ಲ. ಸಮಾವೇಶ ಈ ಗುಂಪುಗಳನ್ನು ಐಕ್ಯತೆ ಮುರಿಯದಂತೆ, ಮತ್ತೆ ಸಂಘಟನೆಗೆ ಹಿಂದೆ ಬರುವಂತೆ ವಿನಂತಿಸಿದೆ.

4ನೇ ಪುಟದಿಂದ

ಗಳನ್ನು ಪ್ರತಿನಿಧೀಕರಿಸುವ ಪಕ್ಷಗಳಾದುದರಿಂದ ದೇಶದ ಇನ್ಯಾವ ರಾಜ್ಯದಲ್ಲೂ ಈ ಸ್ಥಳೀಯ ಆಡಳಿತ ಸಂಸ್ಥೆಗಳ ಮೂಲಕ ಬಡಜನರ ಹಿತರಕ್ಷಣೆ ಮಾಡಲು ಈವರೆಗೆ ಸಾಧ್ಯವಾಗಲಿಲ್ಲ.

ಗ್ರಾಮಾಂತರ ಪ್ರದೇಶ ಜನರಿಗೆ ಅನುಕೂಲವಾಗಬೇಕಾದರೆ, ಅಭಿವೃದ್ಧಿ ಕೆಲಸಗಳು ಸರಿಯಾಗಿ ನಿರ್ವಹಿಸಲ್ಪಡಬೇಕಾದರೆ, ರೈತರ, ಕೃಷಿ ಕಾರ್ಮಿಕರ ಸಣ್ಣಪುಟ್ಟ ವ್ಯಾಪಾರಸ್ಥರ ಮತ್ತು ನೌಕರರ ಹಿತರಕ್ಷಣೆಯಾಗಬೇಕಾದರೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿಗಳು ಮತ್ತು ರೈತರ ಮತ್ತು ಕಾರ್ಮಿಕರ ನಿಜ ಪ್ರತಿನಿಧಿಗಳು ಆರಿಸಿ ಬಂದರೆ ಮಾತ್ರ ಸಾಧ್ಯ. ರಾಜ್ಯ ಸರಕಾರದ ಅಸಮರ್ಪಕ ಆಡಳಿತ, ಸ್ವಜನ ಪಕ್ಷಪಾತ, ಭ್ರಷ್ಟಾಚಾರಗಳ ವಿರುದ್ಧ ಹೋರಾಡುತ್ತಿರುವಾಗಲೇ ಗ್ರಾಮೀಣಾಭಿವೃದ್ಧಿಗೆ ಕರ್ನಾಟಕ ರಾಜ್ಯಕ್ಕೆ ಕೇಂದ್ರದಿಂದ ಹೆಚ್ಚು ಧನ ಸಹಾಯಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಒತ್ತಾಯ ಪಡಿಸುತ್ತದೆ.

ಆದಕಾರಣ ಗ್ರಾಮಾಂತರ ಪ್ರದೇಶದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳಿಗೆ ಸಿಗುವ ಅಧಿಕಾರ ಸರಿಯಾಗಿ ಉಪಯೋಗವಾಗಬೇಕಾದರೆ, ಸರಕಾರದಿಂದ ಒದಗಿಸಲ್ಪಡುವ ಹಣ ಜನರ ಪರವಾಗಿ ವ್ಯಯವಾಗಬೇಕಾದರೆ, ಪಟ್ಟಭದ್ರ, ಹಿತಾಸಕ್ತಿಗಳ ಹಿಡಿತ ಕಡಿಮೆಯಾಗಬೇಕಾದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮತ್ತು ಅದರ ಬೆಂಬಲಿತ ರೈತ-ಕಾರ್ಮಿಕ ಪ್ರತಿನಿಧಿಗಳು ಆರಿಸಿ ಬರುವುದು ಅತ್ಯಗತ್ಯ.

ಬೇಡಿಕೆಗಳು :–

1) ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತಂದು ಟ್ರಿಬ್ಯೂನಲ್‌ನಲ್ಲಿ ತೀರ್ಮಾನವಾದ ಭೂಮಿಯ ಒಡೆತನ ಹಕ್ಕನ್ನು ಪರಿಹಾರ ಕಟ್ಟದೆ (ಪರಿಹಾರ ಕಟ್ಟಿದ್ದರೆ ಅದನ್ನು ವಾಪಸು ಕೊಟ್ಟು) ಕೂಡಲೇ ರೈತರಿಗೆ ಸಿಗುವಂತೆ ಮಾಡುವುದು.

2) ಅದೇ ರೀತಿ ಸರ್ಕಾರಿ ಒಡೆತನದಲ್ಲಿರುವ ಎಲ್ಲಾ ತರದ ಭೂಮಿಯಲ್ಲಿ ಹಲವಾರು ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ರೈತರಿಗೆ ಕೂಡಲೇ ಒಡೆತನ ಪಟ್ಟಾ ನೀಡಬೇಕು. ಭೂ ಮಾಲಕರಿಂದ ಭೂ ಸುಧಾರಣಾ ಕಾನೂನಿನ ಪರಿಮಿತಿಯ ಮೇಲಿರುವ ಹೆಚ್ಚುವರಿ ಭೂಮಿಯನ್ನು ರೈತರಿಗೆ ಹಂಚಬೇಕು.

ಯಾವುದೇ ರೀತಿಯಲ್ಲಿ ರೈತರ ಭೂಮಿಯನ್ನು ಸರ್ಕಾರ ಸ್ವಾಧೀನ ಪಡಿಸುವಾಗ ಅದಕ್ಕೆ ಯೋಗ್ಯ ಬೆಲೆಗಳನ್ನು ರೈತರಿಗೆ ತೆರಬೇಕು.

3) ಕರ್ನಾಟಕ ಸರ್ಕಾರ ಕೃಷಿ ಕಾರ್ಮಿಕರು, ಬೀಡಿ ಕಾರ್ಮಿಕರು ಮೊದಲಾದ ಅಸಂಖ್ಯಾತ ಅಸಂಘಟಿತ ಕಾರ್ಮಿಕರಿಗೆ ನ್ಯಾಯವಾದ ಕೂಲಿ ನಿಗದಿ ಮಾಡಿ ಜಾರಿಗೊಳಿಸಬೇಕು.

4) ಆಹಾರ ಮತ್ತು ವಾಣಿಜ್ಯ ಬೆಳೆಗಳಾದ ಭತ್ತ, ರಾಗಿ, ಜೋಳ, ಗೋಧಿ, ಕಬ್ಬು, ಹೊಗೆಸೊಪ್ಪು, ಹತ್ತಿ, ತೆಂಗಿನಕಾಯಿ, ಅಡಿಕೆ, ರೇಷ್ಮೆಗಳಿಗೆ ಲಾಭದಾಯಕ ಬೆಲೆ ನಿರ್ಧರಿಸಬೇಕು.

5) ನಮ್ಮ ರಾಜ್ಯದ ನದಿ ಮತ್ತು ಅಂತರ್ಜಲ ಮೂಲಗಳನ್ನು ಉಪಯೋಗಿಸಿಕೊಂಡು ಬರಗಾಲ ಪ್ರದೇಶಗಳಿಗೆ ನೀರು ಒದಗಿಸುವ ನೀರಾವರಿ ಯೋಜನೆಗಳು ತ್ವರಿತ ಗತಿಯಲ್ಲಿ ಪೂರ್ಣಗೊಳ್ಳಬೇಕು. ಸಣ್ಣ ನೀರಾವರಿ, ಏತ ನೀರಾವರಿಗೆ ವಿಶೇಷ ಗಮನ ಕೊಡಬೇಕು.

6) ಗ್ರಾಮಾಂತರ ಬಡ ಜನರಿಗೆ, ಕೃಷಿ ಕಾರ್ಮಿಕರಿಗೆ, ಕುಶಲ ಕರ್ಮಿಗಳಿಗೆ, ಬೀಡಿ ಕೆಲಸಗಾರರಿಗೆ, ವಸತಿ ವ್ಯವಸ್ಥೆ ಮಾಡಬೇಕು.

7) ಕೂಲಿಗಾಗಿ ಕಾಳು, ಎನ್ ಆರ್.ಇ.ಪಿ., ಆರ್.ಎಲ್.ಇ.ಜಿ.ಪಿ. ಮೊದಲಾದ ಯೋಜನೆಗಳೆಲ್ಲಾ ಯಾವುದೇ ಮಧ್ಯವರ್ತಿಗಳಿಲ್ಲದೆ ಕಾರ್ಯಗತಗೊಳ್ಳಬೇಕು. ಸಹಕಾರಿ ಬ್ಯಾಂಕ್‌ಗಳಿಂದ ರೈತರಿಗೆ ಸಿಗುವ ಋಣದ ಪ್ರಮಾಣವೇ ಕಡಿಮೆ ಇರುವಾಗ, ಕೇಂದ್ರ ಸರ್ಕಾರದ ಕೃಷಿ ಸಾಲ ನೀತಿಯಿಂದಾಗಿ ಸಾಲ ಮರು ಪಾವತಿ ಮಾಡಲು ನೆರೆ ಬರಗಾಲ ಇತ್ಯಾದಿ ನೈಸರ್ಗಿಕ ಕಾರಣಗಳಿಂದ ಸಾಧ್ಯವಾಗದಿರುವಾಗ ಇಡೀ ಜಿಲ್ಲೆಗಳನ್ನೇ "ಡಿಫಾಲ್ಟರ್" ಎಂದು ನಾಮಕರಣ ಮಾಡಿ ರೈತರು ಖಾಸಗಿ ಸಾಲಗಾರರಿಗೆ ಶರಣಾಗುವಂತೆ ಮಾಡುವ ಕ್ರಮ ತಪ್ಪಬೇಕು. ಇಂತಹ ಪರಿಸ್ಥಿತಿಯಿಂದ ರೈತರನ್ನು ರಕ್ಷಿಸಿ, ಎಲ್ಲಾ ಜಿಲ್ಲೆಗಳಲ್ಲೂ ರೈತರಿಗೆ ಸಾಲ ಸೌಲಭ್ಯ ಸಿಗುವಂತೆ ಒತ್ತಾಯಿಸಬೇಕು

8) ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಗಳಲ್ಲಿರುವಂತೆ ಎಲ್ಲರಿಗೂ ಅಗ್ಗ ದರದ ಅಂಗಡಿಗಳ ಮೂಲಕ ಜೀವನಾವಶ್ಯಕ ವಸ್ತುಗಳು ಸಿಗಬೇಕು.

9) ವ್ಯವಸಾಯಗಾರರಿಗೆ ಸದಾಕಾಲ ವಿದ್ಯುಚ್ಛಕ್ತಿ ಸಾಕಷ್ಟು ವೋಲ್ಟೇಜ್‌ನಲ್ಲಿ ಸಿಗುವಂತಾಗಬೇಕು.

7ನೇ ಪುಟ ನೋಡಿ

ಬಿಹಾರ್

50,000 ರೈತ-ಕೃಷಿ ಕಾರ್ಮಿಕ ಧರಣಿ

ಅಕ್ಟೋಬರ್ 20, 21, 22 ಪಾಟ್ನದ ಬೀದಿಗಳು ಬಿಹಾರದ ಹೆಚ್ಚು ಕಡಿಮೆ ಎಲ್ಲಾ 40 ಜಿಲ್ಲೆಗಳ ಮೂಲೆ ಮೂಲೆಯ ಹಳ್ಳಿಗಳಿಂದ ಬಂದ ಬಡ ರೈತರು, ಕೃಷಿ ಕಾರ್ಮಿಕರು, ಹರಿಜನರು, ಆದಿವಾಸಿಗಳು ಮತ್ತು ಹೆಂಗಸರಿಂದ ತುಂಬಿ ತುಳುಕುತ್ತಿದ್ದವು. ಇವರೆಲ್ಲಾ ರಾಜ್ಯದ ಮುಖ್ಯ ಮಂತ್ರಿ ಬಿಂದೇಶ್ವರಿ ದುಬೆಯವರಿಗೆ ತಮ್ಮ ಬೇಡಿಕೆ ಪತ್ರ ಮಂಡಿಸಲು ಬಂದಿದ್ದರು. ಆದರೆ ಮುಖ್ಯ ಮಂತ್ರಿಗಳಾಗಲೀ ಅವರ ಸಹಚರರಾಗಲಿ ಇವರ ಅಳಲು ಕೇಳಲು ವ್ಯವಧಾನವಿರಲಿಲ್ಲ. ಆದ್ದರಿಂದ ಈ ಶ್ರಮ ಜೀವಿಗಳು 3 ದಿನದ ಧರಣಿ ಮತಪ್ರದರ್ಶನ, ರ್ಯಾಲಿ ನಡೆಸಿದರು.

ಧರಣಿ ಕಾರ್ಯಕ್ರಮದ ಮೂರು ದಿನಗಳನ್ನು ಜಿಲ್ಲಾವಾರಾಗಿ ವಿಂಗಡಿಸಲಾಗಿತ್ತು. ಮೊದಲ ದಿನ ಒಂದು ಜಿಲ್ಲೆಗಳ ಗುಂಪಿನಿಂದ 15000, ಎರಡನೆಯ ದಿನ ಇನ್ನೊಂದು ಜಿಲ್ಲೆಗಳ ಗುಂಪಿನಿಂದ 20,000 ಮೂರನೇ ದಿನ 20,000 ಹೀಗೆ ಭಾರೀ ಸಂಖ್ಯೆಯಲ್ಲಿ ಪಾಟ್ನಾಕ್ಕೆ ಬಂದು ಸೇರಿದರು.

ರೈಲ್ವೇ ನಿಲ್ದಾಣದಿಂದಲೇ ಮುತ್ತಿಗೆ ಹಾಕಿದಂತೆ ಪೋಲೀಸರು ಹುಚ್ಚಾಪಟ್ಟೆ ಹೊಡೆದೋಡಿಸಿದರು. ಮುಖ್ಯ ಮಂತ್ರಿಯವರ ನಿವಾಸದೆದುರು ಸಶಸ್ತ್ರ ಪೋಲೀಸರು ತಡೆದು ನಿಲ್ಲಿಸಿದರು. ಕಿಸಾನ್ ಸಭಾದ 50ನೇ ಅಧಿವೇಶನದಲ್ಲಿ ಅಂಗೀಕರಿಸಿದ 12 ಅಂಶದ ಕಾರ್ಯಕ್ರಮದ ಆಧಾರದ ಮೇಲೆ ಮತ್ತು ರಾಜ್ಯದ ವಿಶಿಷ್ಟ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ಏಳು ಅಂಶಗಳ ಬೇಡಿಕೆ ಪತ್ರ ಸಿದ್ಧಪಡಿಸಲಾಗಿತ್ತು.

ಬಿಹಾರ ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿ ದುರ್ಬಲವಾಗಿರುವ ರಾಜ್ಯ. ಅತ್ಯಂತ ಬರ್ಬರ ಜಮೀನುದಾರ ಪದ್ಧತಿ ಇನ್ನೂ ಜಾರಿಯಲ್ಲಿದೆ ಇಲ್ಲಿ. ಇವೆರಡರ ಸಂಯುಕ್ತ ಪರಿಣಾಮವೆಂದರೆ ಜಮೀನುದಾರರ ಬರ್ಬರ ಅತ್ಯಾಚಾರ, ಬಡವರ ಗೋಳು. ಈ ಹತಾಶಕಾರಿ ಪರಿಸ್ಥಿತಿಯಲ್ಲಿ ದುಸ್ಸಾಹಸವಾದಿ ನಕ್ಸಲೈಟ್ ಗುಂಪುಗಳು, ಜಾರ್ಖಂಡ್ ಮುಕ್ತಿ ಮೋರ್ಚಾದಂತಹ ಸಂಘಟನೆಗಳು ರೈತ, ಕೃಷಿ ಮಜದೂರರು ಆದಿವಾಸಿಗಳನ್ನು ರಾಜಕೀಯವಾಗಿ ದಾರಿ ತಪ್ಪಿಸುತ್ತಿವೆ. ಈ ಹಿನ್ನೆಲೆಯಲ್ಲಿ ಕಿಸಾನ ಸಭಾದ ಸುವರ್ಣ ಮಹೋತ್ಸವದ ಅಧಿವೇಶನದಿಂದ ಉತ್ಸಾಹಿತರಾಗಿ ಕಿಸಾನ ಸಭಾ ಮತ್ತು ಕೃಷಿ ಮಜದೂರ ಯೂನಿಯನ್ ಬಡವರ ಹಿತಾಸಕ್ತಿಗೆ ಹೋರಾಟ ಮಾಡಲು ಸಮರಶೀಲ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇದರ ಫಲವಾಗಿ ಈ ಸಂಘಟನೆಗಳ ಮೇಲೆ ಭಾರಿ ದಬ್ಬಾಳಿಕೆ ನಡೆದಿದೆ. ಸುಮಾರು 5000 ಕಾರ್ಯಕರ್ತರ ಮೇಲೆ ಕೊಲೆ, ದರೋಡೆಗಳಂತಹ 15000 ಸುಳ್ಳು ಪೋಲೀಸು ಮೊಕದ್ದಮೆಗಳನ್ನು ಹಾಕಲಾಗಿದೆ. ಸರ್ಕಾರ, ನಕ್ಸಲೈಟ್ ಗುಂಪುಗಳ ದುಸ್ಸಾಹಸವಾದಿ ಹಿಂಸಾಚಾರವನ್ನು ಎಲ್ಲ ಪ್ರಜಾಸತ್ತಾತ್ಮಕ ಚಳುವಳಿಯನ್ನು ಬಗ್ಗುಬಡಿಯಲು ನೆಪವಾಗಿ ಉಪಯೋಗಿಸುತ್ತಿವೆ. ಈ ಹಿನ್ನೆಲೆಯಲ್ಲಿ 50000 ಬಡವರು ಭಾಗವಹಿಸಿದ ಈ ರ್ಯಾಲಿ ಅತ್ಯಂತ ಮಹತ್ವದ್ದು. ಉತ್ತೇಜನಕಾರಿಯಾದದ್ದು. ★

6ನೇ ಪುಟದಿಂದ

10) ಭೂ ಕಂದಾಯ ರದ್ದಾಗಬೇಕು. ನೀರು ಒದಗಿಸಲ್ಪಡದ ಭೂಮಿಯ ಮೇಲಿನ ನೀರಿನ ತೆರಿಗೆ ರದ್ದಾಗಬೇಕು.

11) ರೆವಿನ್ಯೂ ನಿವೇಶನಗಳಿಗೆ ಸರ್ಕಾರವು ಹಾಕಿದ ದುಬಾರಿ ದಂಡವನ್ನು ರದ್ದು ಮಾಡಬೇಕು.

12) ವರ್ಗೀಕರಣವಿಲ್ಲದೆ ಸರ್ಕಾರವು ಪ್ರಕಟಿಸಿದ ರಿಯಾಯಿತಿಯನ್ನು ಎಲ್ಲಾ ಸಣ್ಣ ರೈತರಿಗೆ ಅನ್ವಯಿಸಬೇಕು.

13) ಹರಿಜನರ ಮತ್ತು ಗಿರಿಜನರ ವಿಷಯದಲ್ಲಿ ಅವರ ಕುಟುಂಬಗಳು ಸ್ವಾವಲಂಬಿಯಾಗುವಂತೆ ವಿಶೇಷ ಗಮನ ಕೊಡಬೇಕು.

ಮಾನ್ಯ ಮತದಾರ ಬಂಧುಗಳೇ,

ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತುಗಳಲ್ಲಿ ಭ್ರಷ್ಟಾಚಾರ ಕಡಿಮೆ ಮಾಡಲು, ಅಭಿವೃದ್ಧಿ ಯೋಜನೆಗಳು ಬಡಜನರ ಪರವಾಗಿ ಕೃತಿಗಿಳಿಯುವಂತೆ ಮಾಡಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಹೆಚ್ಚಿನ ಧನ ಸಹಾಯ ಸಿಗುವಂತಾಗಲು, ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮತ್ತು ಎಲ್ಲಾ ರೈತ ಬಾಂಧವರನ್ನೊಳಗೊಂಡ ವಿಶಾಲ ತಳಹದಿಯ ಬೆಂಬಲಿತ ರೈತರ ನಿಜ ಪ್ರತಿನಿಧಿಗಳನ್ನು ಬಹುಮತದಿಂದ ಬಹುಸಂಖ್ಯೆಯಲ್ಲಿ ಆರಿಸಬೇಕೆಂದು ನಿಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತೇವೆ.

ವಿಷಾದ

ಮುದ್ರಣಾಲಯದ ತೊಂದರೆಯಿಂದಾಗಿ ಈ ಬಾರಿಯ ಐಕ್ಯರಂಗ ಸಂಚಿಕೆಯನ್ನು ಮ್ಯಾಗ್ಜೀನ್ ಆಕಾರದ ಪುಟಗಳಲ್ಲಿ ಹೊರತರಬೇಕಾಗಿದೆ. ಇದಕ್ಕಾಗಿ ಚಂದಾದಾರರಿಗೆ ತೀವ್ರ ವಿಷಾದವನ್ನು ವ್ಯಕ್ತಪಡಿಸುತ್ತೇವೆ, ವ್ಯವಸ್ಥಾಪಕರು — "ಐಕ್ಯರಂಗ"

ಜಸ್‌ಬಿರ್ ಸಿಂಗ್ ನಗರದಲ್ಲಿ ವಿದ್ಯಾರ್ಥಿ ಸಮಾವೇಶ

(1ನೇ ಪುಟದಿಂದ)

ರಾಜಕೀಯದಿಂದ ದೂರವಿರಬೇಕೆಂಬ ಮಾತಿನ ಹಿಂದಿರುವ ಪಟ್ಟಭದ್ರ ಹಿತಾಸಕ್ತಿಗಳ ಕುತಂತ್ರವನ್ನು ವಿದ್ಯಾರ್ಥಿಗಳು ಅರಿತು-ಸಮಾಜ ಬದಲಾವಣೆಯ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು" ಕರೆ ನೀಡಿದರು.

ಅಧ್ಯಕ್ಷ ಭಾಷಣ ಮಾಡಿದ ಆರ್. ಜಯ ಕುಮಾರ್ ರವರು ರಾಜ್ಯ ಹಾಗೂ ಕೇಂದ್ರ ಸರಕಾರಗಳ ಶಿಕ್ಷಣ ನೀತಿಯ ಅಪಾಯದ ಬಗ್ಗೆ ವಿವರಿಸಿದರು.

ಮೊದಲಿಗೆ ಸ್ವಾಗತ ಸಮಿತಿ ಅಧ್ಯಕ್ಷರಾದ ವಾಸುದೇವ ಉಚ್ಚಿಲ್ ಸ್ವಾಗತಿಸಿದರೆ ಕೊನೆಯಲ್ಲಿ ಸ್ವಾಗತ ಸಮಿತಿ ಕಾರ್ಯದರ್ಶಿ ಸುನಿಲ್ ಪಟೇಕರ್ ವಂದಿಸಿದರು. ರಾಜ್ಯ ಎಸ್. ಎಫ್. ಐ. ಕಾರ್ಯದರ್ಶಿ ಎಸ್. ಆರ್. ಆರಾಧ್ಯ, ರಾಜ್ಯದ ಖ್ಯಾತ ಬರಹಗಾರರಾದ ಫಕೀರ್ ಮಹಮ್ಮದ್ ಕಟ್ಪಾಡಿ, ಸಾರಾ ಅಬೂಬಕರ್, ಸಿ. ಐ. ಟಿ. ಯು. ರಾಜ್ಯ ಕಾರ್ಯದರ್ಶಿಗಳಲ್ಲೊಬ್ಬರಾದ ಬಿ. ಮಾಧವರವರುಗಳು ವೇದಿಕೆಯಲ್ಲಿದ್ದರು. ಮೊದಲಿಗೆ ರಾಜ್ಯ ಎಸ್. ಎಫ್. ಐ. ಖಜಾಂಚಿ ಶಾಂತ ಕುಮಾರಿಯವರು ಹುತಾತ್ಮ ಸಂಗಾತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸುವ ನಿರ್ಣಯ ಮಂಡಿಸಿದರು

ಸಮಾವೇಶ ನಡೆಯುವ ಸ್ಥಳಕ್ಕೆ ಕಾ|| ಜಸ್‌ಬೀರ್ ಸಿಂಗ್ ನಗರವೆಂದೂ, ಸಭಾಂಗಣಕ್ಕೆ ಕಾ|| ಅಶೋಕಲತಾಜೈನ್ ಸಭಾಂಗಣವೆಂದೂ, ಪ್ರವೇಶ ದ್ವಾರಕ್ಕೆ ಕಾ|| ದಸ್ತಗೀರ್ ದ್ವಾರವೆಂದೂ ಹೆಸರಿಸಲಾಗಿತ್ತು. ಮಾನವನ ವಿಕಾಸವನ್ನು ವಿವರಿಸುವ ಚಿತ್ರ ಪ್ರದರ್ಶನ ಹಾಗೂ ಎಸ್. ಎಫ್. ಐ. ಹೋರಾಟಗಳ ಚಿತ್ರಣದ ಸುದ್ದಿ, ಫೋಟೋ ಪ್ರದರ್ಶನ ವ್ಯವಸ್ಥೆ ಮಾಡಲಾಗಿತ್ತು.

ಸಿ. ಐ. ಟಿ. ಯು, ಆರ್.ಎಂ.ಎಸ್, ರೈಲ್ವೆ ಕಾರ್ಮಿಕರ ಸಂಘ, ಡಿ. ವೈ. ಎಫ್. ಐ. ರಿಕ್ಷಾ ಚಾಲಕರ ಸಂಘ, ಬೀಡಿ ಕಾರ್ಮಿಕರ ಸಂಘ, ರೈತ ಸಂಘ ಮತ್ತು ಜೀವ ವಿಮಾ ನೌಕರರ ಸಂಘದ ಪರಿಯಿಂದ ಸಮಾವೇಶಕ್ಕೆ ಶುಭ ಕೋರಲಾಯಿತು.

ಪ್ರತಿನಿಧಿ ಅಧಿವೇಶದಲ್ಲಿ ರಾಜ್ಯ ಸಮಿತಿ ಪರವಾಗಿ ರಾಜ್ಯ ಕಾರ್ಯದರ್ಶಿ ಎಸ್. ಆರ್. ಆರಾಧ್ಯರವರು ಸವಿಸ್ತಾರದಾದ ಕರಡು ವರದಿಯನ್ನು ಮಂಡಿಸಿದರು. ಜಿಲ್ಲೆಗಳಿಂದ ಪ್ರತಿನಿಧಿಗಳು ಎರಡು ಗಂಟೆಗಳ ಕಾಲ ವರದಿ ಮೇಲೆ ಚರ್ಚೆ ನಡೆಸಿದರು, ಚರ್ಚೆಯಲ್ಲಿ ಮೂಡಿಬಂದ ಸಲಹೆಗಳೊಂದಿಗೆ ಸರ್ವಾನುಮತದಿಂದ ವರದಿ ಅಂಗೀಕರಿಸಲಾಯಿತು. ಆಯ್ಕೆಯಾದ ನಿರ್ಣಯ ಮಂಡಳಿ, ಅಧ್ಯಕ್ಷ ಮಂಡಳಿ, ಅರ್ಹತಾ ಮಂಡಳಿಗಳು ತಮ್ಮ ಕೆಲಸ ನಿರ್ವಹಿಸಿ ಸಮಾವೇಶದ ಯಶಸ್ವಿಗೆ ನೆರವಾದರು. ಚರ್ಚೆಯಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ರಾಜ್ಯದಲ್ಲಿ ಎಸ್.ಎಫ್.ಐ. ಬೆಳೆಸಲು ಇರುವ ವ್ಯಾಪಕ ಅವಕಾಶ ಹಾಗೂ ಮಾರ್ಗದ ಬಗ್ಗೆ ದೃಢ ವಿಶ್ವಾಸದಿಂದ ಮಾತನಾಡಿದರು.

ರಾಜ್ಯದ ಹಾಗೂ ರಾಷ್ಟ್ರದ ಹಲವಾರು ಶೈಕ್ಷಣ ಸಮಸ್ಸೆಗಳೂ ಸೇರಿದಂತೆ ವಿದ್ಯಾರ್ಥಿ ಸಮುದಾಯ ಹಾಗೂ ರಾಷ್ಟ್ರ ಅನುಭವಿಸುತ್ತಿರುವ ಹಲವಾರು ಸಮಸ್ಯೆಗಳ ಬಗ್ಗೆ ನಿರ್ಣಯಗಳ ಮೂಲಕ ಸಮಾವೇಶ ಗಮನ ಸೆಳೆಯಿತು.

ಡಿಸೆಂಬರ್ 11 ರಿಂದ 15 ರವರೆಗೆ ಆಂಧ್ರದಲ್ಲಿ ನಡೆಯಲಿರುವ ರಾಷ್ಟ್ರ ಸಮ್ಮೇಳನಕ್ಕೆ 10 ಪ್ರತಿನಿಧಿಗಳು, 5 ವೀಕ್ಷಕರು ಹಾಗೂ 2 ಬದಲಿ ಪ್ರತಿನಿಧಿಗಳನ್ನು ಸಮಾವೇಶದಲ್ಲಿ ಆಯ್ಕೆ ಮಾಡಲಾಯಿತು.

ಅಧಮ್ಯ ಉತ್ಸಾಹದೊಂದಿಗೆ, ಖಾತರಿಯಾದ ಭವಿಷ್ಯದ ಆಶಯದೊಂದಿಗೆ, ಹೋರಾಟವನ್ನು ಇನ್ನೂ ದೃಢವಾಗಿ ಮುಂದುವರಿಸುವ ನಿರ್ಧಾರದೊಂದಿಗೆ ಸಮಾವೇಶ ಮುಕ್ತಾಯವಾಯಿತು.

ವರದಿ : ಕುಮಾರ್ ಕುಂದಾಪುರ

Printed & Published by P. Ramachandra Rao on behalf of the Communist Party of India (Marxist) Karnataka State Committee, Editorial and Manageriel Office L-56, K. V. Temple Street Sultanpet, Bangalore-560 053
EDITOR: P RAMACHANDRA RAO, MANAGING EDITOR: N. K. UPADHYAYA Phone: 75331
Printed at RAVEE TRADERS, Balepet Cross, Bangalare-560 053